ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮುಂಬಯಿ ಕನ್ನಡಿಗರ ಒಂದು ಹೊಳಪಿನ ಸಾಲಿದೆ. 'ಮುಂಬೈ ಕನ್ನಡಿಗರು' ಕೆಟಗರಿಯನ್ನು ಮೀರಿ ಕನ್ನಡದ ಅತ್ಯುತ್ತಮ ಕಥೆಗಾರರ ಸಾಲಿಗೆ ಸೇರಿದವರು ತುಳಸಿ ವೇಣುಗೋಪಾಲ್ (ನಿಧನ: ಏಪ್ರಿಲ್ 8). ಹೊರನಾಡಿನಲ್ಲಿ ಇದ್ದುದರಿಂದಲೋ ಹೆಚ್ಚು ಮಾತನಾಡದ ಕಾರಣದಿಂದಲೋ ತುಳಸಿ ಅವರ ಕಥೆಗಳು ಸಾಹಿತ್ಯವಲಯದಲ್ಲಿ ಚರ್ಚೆಗೊಳಗಾದುದು ಕಡಿಮೆಯೇ. ಕನ್ನಡದ ಈ ಸಶಕ್ತ ಕಥೆಗಾರ್ತಿಯ ವ್ಯಕ್ತಿತ್ವ–ಸಾಧನೆಯ ಕುರಿತು ಮತ್ತೊಬ್ಬ ಕಥೆಗಾರ್ತಿ ಜಯಶ್ರೀ ಕಾಸರವಳ್ಳಿ ಬರೆದ ಆಪ್ತಚಿತ್ರಣ ಇಲ್ಲಿದೆ.



ಚಿತ್ರ: ನಿನಾದ್ ದಿವಾಕರ್

# ಇಷ್ಟು ಅವಸರ ಏನಿತ್ತು ತುಳಸಿ...

ಕೆಲ ದಿನಗಳ ಹಿಂದಷ್ಟೇ ತುಳಸಿ ವೇಣುಗೋಪಾಲ್ ಅವರಿಗೆ ತುಂಬಾ ಹುಷಾರಿಲ್ಲವೆಂಬ ಆತಂಕದ ಸುದ್ದಿ ಬಂದು ತಲುಪಿ, ಚೇತರಿಸಿಕೊಳ್ಳುವಷ್ಟರಲ್ಲೇ 'ಅವರಿಲ್ಲ!' ಎಂಬ ಮತ್ತೊಂದು ಚಿರನೋವಿಗೆ ಸರಿದುಹೋಗುವಂತಹ ಆಘಾತಕಾರಿ ಸುದ್ದಿ ತಲುಪಿದೆ. ನನಗೆ ವಿಷಯ ತಿಳಿಯುವಷ್ಟರಲ್ಲಿ, ಕಡೆಯದೊಂದು ಸಂವಹನಕ್ಕೂ ಆಸ್ಪದವಿಲ್ಲದಂತೆ ಅವರಾಗಲೇ ಕೋಮಾಕ್ಕೆ ಜಾರಿ ಆಗಿತ್ತು. ಲಿವರ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಪಡೆದು ಮಂಗಳೂರಿನ ತಂಗಿ ಮನೆಯಲ್ಲಿದ್ದಾರೆಂದು ತಿಳಿದು, ಹೋಗಿ ನೋಡಿ ಬರೋಣವೆನ್ನುವಷ್ಟರಲ್ಲಿ ಅವರು ವಿಧಿವಶರಾದ ಸುದ್ದಿಯನ್ನು ಜೀರ್ಣಿಸಿಕೊಳ್ಳುವುದು ಅವರನ್ನು ಹತ್ತಿರದಿಂದ ಕಂಡವರಿಗೆ ತುಂಬಾ ಕಷ್ಟ.

ಹಾಗೆ ನೋಡಿದರೆ, ತುಳಸಿಯವರು ವೈಯಕ್ತಿಕವಾಗಿ ಪರಿಚಯವಾಗುವುದಕ್ಕೂ ಮುಂಚಿನಿಂದಲೂ, ಆಗೊಮ್ಮೆ ಈಗೊಮ್ಮೆ ಪ್ರಕಟಗೊಳ್ಳುತ್ತಿದ್ದ ಅವರ ಅಲ್ಲೊಂದು ಇಲ್ಲೊಂದು ಕತೆಗಳನ್ನು ನಾನು ಅಪಾರ ಆಸ್ಥೆಯಿಂದ ಓದಿ, ಇನ್ನಿಲ್ಲದಷ್ಟು ಮೆಚ್ಚಿಕೊಂಡವಳು. ಎಲ್ಲೋ ದೂರದ ಮುಂಬಯಿಯಲ್ಲಿ ಕುಳಿತು ಬರೆವ ಅವರ ಕತೆಗಳು ನನಗರಿವಿಲ್ಲದ ಹಾಗೆ ನನ್ನನ್ನು ಆರ್ದ್ರಗೊಳಿಸಿದ್ದಿದೆ; ಅಲ್ಲಿ ಮಿಡಿದ ಯಾವುದೋ ಸ್ಪಂದನ ನನ್ನ ಹೃದಯವನ್ನು ಕರಗಿಸಿ ಹನಿಗಣ್ಣಾಗಿಸಿದ್ದಿದೆ. ಕ್ರಮೇಣ ಅವರ ಪರಿಚಯವಾಗಿ, ಅವರ ಕತೆಗಳ ಜೊತೆಗೆ ಅವರ ಆತ್ಮೀಯತೆಯೂ ದಕ್ಕಿ, ಅವರ ಪ್ರೀತಿಯ ಬೆಚ್ಚಗಿನ ಬಿಸುಪಿನಲ್ಲಿ ನಾ ಕರಗಿದರೂ ಅವರ ಕತೆಗಳ ಪ್ರಭಾವ ಮತ್ತು ಅವು ನನ್ನ ಮೇಲೆ ಮೂಡಿಸಿದ ಪರಿಣಾಮಗಳನ್ನು ಕುರಿತು ಪದಗಳಲ್ಲಿ ಜೋಡಿಸಿ ಅವರ ಮುಂದಿಡುವ ಸಾಹಸಕ್ಕೆ ನಾನೆಂದೂ ಕೈ ಹಾಕಿರಲಿಲ್ಲ.

ಆದರೆ ಎರಡು ವರುಷಗಳ ಹಿಂದೆ ಉಮಾರಾವ್ ಅವರು, 'ಮುಂಬಯಿ ಲೇಖಕರು' ಎಂಬ ಸರಣಿ ಉಪನ್ಯಾಸಗಳ ಕಾರ್ಯಕ್ರಮವೊಂದನ್ನು ಸುಚಿತ್ರಾದಲ್ಲಿ ಏರ್ಪಡಿಸಿದ್ದರು. ಆ ಸಂದರ್ಭದಲ್ಲಿ ತುಳಸಿ ವೇಣುಗೋಪಾಲ್ ಅವರ ಕತೆಗಳ ಕುರಿತು ಮಾತನಾಡಲು ನನ್ನನ್ನು ಕೇಳಿಕೊಂಡರು. ಅಲ್ಲಿಯವರೆಗೆ ಅವರ ಕತೆಗಳ ಭಾವುಕ ಪ್ರಪಂಚಕ್ಕೆ ಮಾತ್ರ ಸ್ಪಂದಿಸಿದ್ದ ನನಗೆ, ಆ ಕತೆಗಳ ಮರು ಓದು, ಕತೆಯಾಚೆಗಿನ ಮತ್ತೊಂದು ಮಗ್ಗುಲಿಗೆ ಸಹಜವಾಗಿ ತೆರೆದುಕೊಳ್ಳಲು ಅನುವು ಮಾಡಿಕೊಡುತ್ತಾ ಮತ್ತೊಂದು ಅಚ್ಚರಿಗೆ ನನ್ನನ್ನು ದೂಡಿದ್ದು ನಿಜ. ಅಲ್ಲಿಯವರೆಗೂ ಕೇವಲ ಒಳ್ಳೆಯ ಕತೆಗಳಾಗಿ ಮಾತ್ರ ಆ ಕತೆಗಳನ್ನು ಓದಿದ್ದ ನನಗೆ, ಒಟ್ಟಾರೆ ಕತೆಗಳ ಮೂಲಕ ಅವರು ಅನಾವರಣಗೊಳಿಸಲೆತ್ನಿಸಿದ ಹೆಣ್ಣು ಮನಸ್ಸಿನ ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳನ್ನು ಅದೆಷ್ಟು ಆಳವಾಗಿ ಸ್ಪರ್ಶಿಸಿದ್ದರೆಂದರೆ, ಓದುತ್ತಾ ನಾನು ದಂಗು ಬಡಿದಿದ್ದೆ. ಹಾಗೆ ಒಳ ಇಣುಕಿ, ಅವರು ಪೋಷಿಸಿದ ಕಥಾಜಗತ್ತಿನ ಭಾವಕೋಶವೊಂದು ಮತ್ತಷ್ಟು ದಟ್ಟವಾಗಿ ನನ್ನನ್ನು ಅವರಿಸಿಕೊಳ್ಳುತ್ತಿದ್ದ ಹಾಗೆ, ತನ್ಮೂಲಕ ಮಾನವೀಯ ಸಂಬಂಧಗಳ ಜಟಿಲತೆಯನ್ನು ಸ್ಪರ್ಶಿಸುವ, ಮುಟ್ಟಿ ನೋಡಿ ಅನುಭವಿಸುವ ಅಗಾಧ ನೋವಿನ ಆಗರದ ಪರಿಚಯವನ್ನೂ ಅವು ನನಗೆ ನೀಡುತ್ತಾ ಹೋದವು.

ತದನಂತರ, ಅವರ ಪ್ರತಿ ಕತೆಯೂ ತನ್ನದೇ ಆದ ರೀತಿಯಲ್ಲಿ ನನ್ನನ್ನು ಇನ್ನಿಲ್ಲದಷ್ಟು ಕಾಡತೊಡಗಿದ್ದುಂಟು, ಅರ್ಥವಾಗದ ಒಂದು ವಿಚಿತ್ರ ಕ್ಷೋಭೆಗೆ ಒಳಪಡಿಸಿದ್ದುಂಟು. ಅವರ ಕತೆಗಳನ್ನು ಓದುತ್ತಾ ಹೋದ ಹಾಗೆ,